**SC No. 149/2025**
**PW-7**
**CW-27**

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ: 57)
ನಮೂನೆ ಸಂಖ್ಯೆ: 4

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

## ಎಸ್.ಸಿ ನಂಃ 149/2025

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀಮತಿ ಜ್ಯೋತಿ ಹಿರೇಮಠ | ಪ್ರಾಸಾಃ 07 |
| ತಂದೆಯ/ಗಂಡನ ಹೆಸರು | : | ಕಲ್ಲಯ್ಯ ಶಂಡಗಿ | ಚಾಸಾಃ 27 |
| ವಯಸ್ಸು | : | 27 ವರ್ಷ | ದಿನಾಂಕ : 02.09.2026 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು. |
| ಉದ್ಯೋಗ | : | ಕೇರ್ ಟೇಕರ್, ಸುಬ್ರಮಣ್ಯ ಹೆಲ್ತ ಹೋಮ್ ಕೇರ್, ಬೆಳಗಾವಿ | |
| ವಾಸಸ್ಥಳ | : | ವಡಗಾಂವ, ಬೆಳಗಾವಿ | |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಚಾಸಾ 30 ಗೊತ್ತು. ಅವರಿಗೆ ಸೇರಿದ ಏಜೆನ್ಸಿಯ ಅಡಿಯಲ್ಲಿ ನಾನು ಕೆಲಸ ಮಾಡುತ್ತಿದ್ದೇನೆ. ನನಗೆ ಚಾಸಾ 1 ಗೊತ್ತು. ಅವರು ಬೆಳಗಾವಿಯ ಜಿಲ್ಲಾ ಮಕ್ಕಳ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ನನಗೆ ಚಾಸಾ 23 ರಿಂದ 26 ಮತ್ತು 28, 29 ಗೊತ್ತು.

**SC No. 149/2025**
**PW-7**
**CW-27**

2. ದಿಃ 08.06.2024 ರಂದು ಚಾಸಾ 30 ರವರು ನನಗೆ ಫೋನ್ ಮಾಡಿ ಒಂದು ಮಗುವನ್ನು ದತ್ತು ತೆಗೆದುಕೊಳ್ಳುವವರು ಇದ್ದಾರೆಯೇ ಎಂದು ಕೇಳಿದರು. ಅವರು ನನಗೆ ಒಂದು ಹೆಣ್ಣು ಮಗು ದತ್ತಕ್ಕೆ ಕೊಡಲು ಇದೆ ಎಂದು ಹೇಳಿದರು. ನಾನು ಈ ಬಗ್ಗೆ ಸಂಶಯ ಪಟ್ಟು ಚಾಸಾ 30 ರವರಿಗೆ ಹೇಳಿ ಆ ಬಳಿಕ ನಾವು ಮಕ್ಕಳ ಸಹಾಯವಾಣಿಗೆ ದೂರು ಕೊಟ್ಟಿದ್ದೆವು. ಅದೇ ದಿನ ರಾತ್ರಿ ನಮ್ಮ ಏಜೆನ್ಸಿಯ ಕಚೇರಿಗೆ ನಾನು ಹೋಗಿದ್ದು ಅಲ್ಲಿಗೆ ಚಾಸಾ 24 ಮತ್ತು ಭಜಂತ್ರಿಯವರು ಫೋನ ಮಾಡಿದ್ದರು. ಅದಕ್ಕಿಂತ ಮೊದಲು ಚಾಸಾ 30 ರವರು ಹೇಳಿದ ಪ್ರಕಾರ ನಾನು ಮಹಾದೇವಿ ಜೈನರನೊಂದಿಗೆ ಫೋನಿನಲ್ಲಿ ಮಾತನಾಡಿ ಮಗುವನ್ನು ನಾನು ತೆಗೆದುಕೊಳ್ಳುತ್ತೇನೆ ಎಂದು ಆಕೆಗೆ ಹೇಳಿದೆನು. ನಾನು ಭಜಂತ್ರಿಯವರೊಂದಿಗೆ ಫೋನಿನಲ್ಲಿ ಮಾತನಾಡಿದೆನು. ನಾನು ಮಹಾದೇವಿ ಜೈನರನೊಂದಿಗೆ ಫೋನಿನಲ್ಲಿ ಮಾತನಾಡುವಾಗ ಆಕೆ ಮಗುವಿಗೆ ರೂ.2 ಲಕ್ಷ ಕೊಡಬೇಕು ಎಂದು ಹೇಳಿದ್ದು ನಾನು ರೂ. 1,40,000/- ಕೊಡುತ್ತೇನೆ ಎಂದು ಆಕೆಗೆ ಹೇಳಿದೆನು. ಅದಕ್ಕೆ ಮಹಾದೇವಿ ಜೈನರವರು ಒಪ್ಪಿಕೊಂಡಳು. ಆಕೆ ಮರುದಿನ ಅಂದರೆ 9ನೇ ತಾರೀಖು ಬೆಳಿಗ್ಗೆ ಹೈವೆದ ನಿಸರ್ಗ ಧಾಬಾದ ಬಳಿ ಬರಲು ಹೇಳಿದ್ದಳು. ಮರುದಿನ ಬೆಳಿಗ್ಗೆ ನಾವು ಮತ್ತು ಪೋಲಿಸರು ಅಲ್ಲಿಗೆ ಹೋಗಿದ್ದು ನಾನು ಮತ್ತು ಚಾಸಾ 24 ಮಗುವನ್ನು ಖರೀದಿ ಮಾಡುವ ತಾಯಿ ಮತ್ತು ತಂದೆಯಾಗಿ ನಟಿಸುವಂತೆ ನಿರ್ಧರಿಸಿದೆವು.

3. ನಾವು ಎಲ್ಲರೂ ಮೊದಲು ಶ್ರೀನಗರ ಗಾರ್ಡನ್ ಬಳಿ ಸೇರಿ ಅಲ್ಲಿ ಮಾತನಾಡಿಕೊಂಡೆವು. ಅಲ್ಲಿ ನಾನು ಚಾಸಾ 1, ಚಾಸಾ 24, ಪೋಲಿಸ ಸಿಬ್ಬಂದಿ, ಚಾಸಾ 24 ರವರೊಂದಿಗೆ ಬಂದ ಇನ್ನಿಬ್ಬರು ಸಿಬ್ಬಂದಿಗಳು ಇದ್ದೆವು. ನಾನು ಮತ್ತು ಚಾಸಾ 24 ಸೇರಿ ಒಂದು ಬೈಕಿನಲ್ಲಿ ಹೈವೆದ ನಿಸರ್ಗ ಧಾಬಾದ ಬಳಿ ಹೋದೆವು. ನಿಸರ್ಗ ಧಾಬಾದಿಂದ ಸುಮಾರು 20 ರಿಂದ 30 ಮೀಟರ ದೂರದಲ್ಲಿ ಮರೆಯಲ್ಲಿ ಉಳಿದವರು ನಿಂತಿದ್ದರು. ಅಲ್ಲಿಗೆ ಬಾಗೇವಾಡಿ ಕಡೆಯಿಂದ ಒಂದು ಬಿಳಿ ಬಣ್ಣದ ಕಾರು ಬಂದಿತ್ತು. ಆ ಕಾರಿನ ನಂಬರು

8906 ಎಂದು ನನಗೆ ನೆನಪಿದ್ದು ಉಳಿದ ನಂಬರು ನನಗೆ ನೆನಪಿಲ್ಲ. ಆ ಕಾರ್ ಬಂದು ನಮ್ಮ ಮುಂದೆ ನಿಂತಿತು. ಆಗ ಮಹಾದೇವಿ ಜೈನರವರು ನನಗೆ ಫೋನ ಮಾಡಿದರು. ಆ ಬಳಿಕ ಆಕೆ ಇಳಿದು ಬಂದು ನನ್ನ ಮತ್ತು ಚಾಸಾ 24 ರವರ ಜೊತೆ ಮಾತನಾಡಲು ಪ್ರಾರಂಭಿಸಿದರು. ಚಾಸಾ 24 ರವರು ಮಗುವನ್ನು ತೆಗೆದುಕೊಳ್ಳೋಣ ಎಂದು ಹೇಳಿದಾಗ ಮಹಾದೇವಿ ಜೈನರವರು ಮೊದಲು ದುಡ್ಡು ಕೊಡಿ ಎಂದು ಹೇಳಿದರು. ಆಗ ಚಾಸಾ 24 ರವರು ನಮ್ಮ ಜೊತೆ ಇದ್ದ ತಂಡದವರಿಗೆ ಕೈ ಸನ್ನೆ ಮಾಡಿದರು. ಈ ರೀತಿ ಸನ್ನೆ ಮಾಡುವುದನ್ನು ಮಹಾದೇವಿ ಜೈನರವರು ನೋಡಿದಳು. ನಾವು ಕಾರಿನ ಬಳಿ ಹೋದಾಗ ಒಂದು ಹುಡುಗಿಯ ಬಳಿ ಒಂದು ಸಣ್ಣ ಮಗು ಇತ್ತು. ನಾನು ಆ ಮಗುವನ್ನು ನನ್ನ ಕೈಗೆ ಪಡೆದುಕೊಂಡೆನು. ಆ ಬಳಿಕ ನಮ್ಮ ತಂಡದವರು ಅಲ್ಲಿಗೆ ಬಂದುದ ಮಹಾದೇವಿ ಜೈನರವರು ಹಿಡಿದುಕೊಂಡರು.

4. ಆಗ ಮಹಾದೇವಿ ಜೈನರವರು ಅಳಲು ಪ್ರಾರಂಭಿಸಿದ್ದು ನಮ್ಮ ತಂಡದವರು ಆಕೆಯನ್ನು ವಿಚಾರಿಸಿದಾಗ ಆಕೆ ಆ ಮಗವನ್ನು ಕಿತ್ತೂರಿನ ಚಂದನ ಸುಭೆದಾರ ಎನ್ನುವವರಿಂದ ರೂ.60,000/- ಕ್ಕೆ ಖರೀದಿಸಿದ್ದಳು ಎಂದು ಹೇಳಿದರು. ಆ ಬಳಿಕ ನಾನು ಆ ಮಗುವನ್ನು ಹಿಡಿದು ಆ ಕಾರಿನಲ್ಲಿ ಕುಳಿತುಕೊಂಡೆ ಮತ್ತು ಎಲ್ಲರೂ ಸೇರಿ ಮಾಳಮಾರುತಿ ಪೋಲಿಸ ಠಾಣೆಗೆ ಬಂದೆವು. ಕಾರಿನಲ್ಲಿ ಮಗುವನ್ನು ಹಿಡಿದುಕೊಂಡು ಕುಳಿತವಳು ಮಹಾದೇವಿ ಜೈನರವರ ಮಗಳು ಪೂಜಾ ಎಂದು ನಮಗೆ ತಿಳಿಯಿತು. ಈ ಘಟನೆ ಆಗುವಾಗ ಬೆಳಿಗ್ಗೆ 06.00 ಗಂಟೆ ಆಗಿತ್ತು. ನಾನು ಆ ಮಹಾದೇವಿ ಜೈನರವರನ್ನು ನೋಡಿದಲ್ಲಿ ಗುರುತಿಸುತ್ತೇನೆ. ಸಾಕ್ಷಿಯು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪೈಕಿ 1ನೇ ಆರೋಪಿಯನ್ನು ಗುರುತಿಸಿರುತ್ತಾರೆ. ಮಗುವನ್ನು ನಾವು ಮಾಳಮಾರುತಿ ಪೋಲಿಸ ಠಾಣೆಗೆ ತೆಗೆದುಕೊಂಡು ಹೋದ ಬಳಿಕ ಪೋಲಿಸರು ಆ ಮಗುವನ್ನು ಬೆಳಗಾವಿಯ ಸಿವಿಲ್ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದರು. ಈ ಬಗ್ಗೆ ಪೋಲಿಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

**SC No. 149/2025**
**PW-7**
**CW-27**

ಪಾಟೀ ಸವಾಲುಃ 1ನೇ ಆರೋಪಿತರ ಪರವಾಗಿಃ ಶ್ರೀ ಸಿ ಎ ಟಿ. ವಕೀಲರಿಂದಃ

5. 8ನೇ ತಾರೀಖಿನಂದು ಚಾಸಾ 30 ರವರು ಮಧ್ಯಾಹ್ನ 12.00 ಗಂಟೆ ಸುಮಾರಿಗೆ ನನಗೆ ಫೋನ ಮಾಡಿ ಮಗು ದತ್ತಕ್ಕೆ ಕೊಡಲು ಇದೆ ಎನ್ನುವ ವಿಚಾರ ಹೇಳಿದ್ದರು. ಅವರು ನನಗೆ ನನ್ನ ಸ್ವಂತ ಫೋನಾದ 7349619127 ಗೆ ಫೋನ ಮಾಡಿ ಹೇಳಿದ್ದು ಅವರ ಫೋನ ನಂಬರು ನನಗೆ ನೆನಪಿಲ್ಲ. ನನಗೆ ಯಾವುದೇ ಮಗುವನ್ನು ದತ್ತಕೆ ತೆಗೆದುಕೊಳ್ಳುವ ಇರಾದೆ ಇರಲಿಲ್ಲ. ನಾನು ಚಾಸಾ 30 ರವರ ಏಜೆನ್ಸಿಯಲ್ಲಿ ಬೇರೆ ಬೇರೆಯವರ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದ ಕಾರಣ ಚಾಸಾ 30 ರವರು ನನಗೆ ಮಗು ದತ್ತಕಕ್ಕೆ ಕೊಡಲು ಇದೆ ಎನ್ನುವ ವಿಚಾರವನ್ನು ತಿಳಿಸಿದ್ದರು. ನಾನು ಕೇರ್ ಟೇಕರ್ ಆಗಿ ಆ ಮಗುವನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಎನ್ನುವ ಕಾರಣದಿಂದ ಚಾಸಾ 30 ರವರು ನನಗೆ ಈ ವಿಚಾರವನ್ನು ತಿಳಿಸಿದ್ದರು. ನಾನು ಆ ಮಗುವನ್ನು ದತ್ತಕಕ್ಕೆ ತೆಗೆದುಕೊಳ್ಳಲು ಒಪ್ಪಿಕೊಂಡಿರಲಿಲ್ಲ. ಚಾಸಾ 30 ರವರು ನನಗೆ ಹೇಳಿದ ವಿಷಯವನ್ನು ನಾನು ಮಕ್ಕಳ ಸಹಾಯವಾಣಿಗೆ ಅದೇ ದಿನ ರಾತ್ರಿ ತಿಳಿಸಿದ್ದೆನು. ನಾನು ಈ ವಿಚಾರವನ್ನು ನೇರವಾಗಿ ಪೋಲಿಸರಿಗೆ ಹೇಳಿರುವುದಿಲ್ಲ. ನಾನು ಮಕ್ಕಳ ಸಹಾಯವಾಣಿಯವರಿಗೆ ಈ ವಿಚಾರವನ್ನು ಫೋನ ಮೂಲಕ ತಿಳಿಸಿದ್ದೆನು. ಆ ದಿನ ನಾನು ಮಕ್ಕಳ ಸಹಾಯವಾಣಿಯವರ ಬಳಿ ಹೋಗಿಲ್ಲ ಮತ್ತು ಅವರು ನನ್ನ ಬಳಿ ಬಂದಿಲ್ಲ.

6. ದಿ. 09.06.2024 ರಂದು ಬೆಳಿಗ್ಗೆ 05.30 ಗಂಟೆಗೆ ನಾವು ಮೊದಲ ಬಾರಿಗೆ ನಿಸರ್ಗ ಧಾಬಾದ ಬಳಿ ಹೋಗಿದ್ದೆವು. 1ನೇ ಆರೋಪಿಯು ನನಗೆ ಮಾಹಿತಿ ಕೊಟ್ಟ ಪ್ರಕಾರ ನಾನು ನಿಸರ್ಗ ಧಾಬಾದ ಬಳಿ ಹೋಗಿದ್ದೆನು. ಮಹಾದೇವಿ ಜೈನರವರಿಗೆ ಅಲ್ಲಿಗೆ ಬರಲು ಯಾರು ಮಾಹಿತಿ ಕೊಟ್ಟಿದ್ದರು ಎನ್ನುವ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ನಾನು ನಿಸರ್ಗ ಧಾಬಾದ ಬಳಿ ಹೋಗುವ ಸ್ವಲ್ಪ ಮೊದಲು ನಮ್ಮ ತಂಡದವರು ಅಲ್ಲಿಗೆ ಹೋಗಿ ನಿಂತುಕೊಂಡಿದ್ದರು. ನಾನು ನಿಸರ್ಗ ಧಾಬಾದ ಬಳಿ ಹೋದ ನಂತರ ಮಹಾದೇವಿ

ಜೈನರವರೊಂದಿಗೆ ಮಾತನಾಡುವ ಮೊದಲು ನಾನು ಬೇರೆ ಯಾರೊಂದಿಗೂ ಕೂಡ ಮಾತನಾಡಿರುವುದಿಲ್ಲ. ನಾವು ಬೆಳಿಗ್ಗೆ 05.00 ಗಂಟೆಗೆ ಶ್ರೀನಗರ ಗಾರ್ಡನಲ್ಲಿ ಇದ್ದಾಗ ನಾನು ಚಾಸಾ 24 ರೊಂದಿಗೆ ಮಾತನಾಡಿದ್ದೆನು. ನಾನು ಚಾಸಾ 24 ರವರ ಬಳಿ ಹಿಂದಿನ ದಿನ ಚಾಸಾ 30 ರವರು ನನ್ನ ಬಳಿ ಮಗುವನ್ನು ದತ್ತಕಕ್ಕೆ ಕೊಡಲು ಇದೆ ಎಂದು ಹೇಳಿರುವ ವಿಚಾರವನ್ನು ಮಾತನಾಡಿದ್ದೆವು. ಸಾಕ್ಷಿ ನಾವು ಮೊದಲನೇ ದಿನ ಫೋನಿನಲ್ಲಿ ಕೂಡ ಮಾತನಾಡಿದ್ದೆವು ಎಂದು ಹೇಳುತ್ತಾರೆ. ನಾವು ಶ್ರೀನಗರದಲ್ಲಿ ಇದ್ದಾಗ ಮಾಳಮಾರುತಿ ಪೋ.ಠಾಣೆಯಿಂದ ಇಬ್ಬರು ಸಿಬ್ಬಂದಿಗಳು ಬಂದಿದ್ದರು. ನಾನು ಅಲ್ಲಿಯೇ ಇದ್ದಂತಹ ಮಾಳ ಮಾರುತಿ ಪೋ.ಠಾಣೆಗೆ ಹೋಗಿ ಈ ರೀತಿ ಕಾನೂನುಬಾಹಿರವಾಗಿ ಮಗುವಿನ ದತ್ತಕ ಪ್ರಕ್ರಿಯೆ ನಡೆಯುತ್ತಿದೆ ಎಂದು ಹೇಳಿರುವುದಿಲ್ಲ. ಈ ರೀತಿ ಪೋ.ಠಾಣೆಗೆ ಮಾಹಿತಿ ಕೊಡಲು ನನಗೆ ಯಾವುದೇ ಅಡಚಣೆ ಇರಲಿಲ್ಲ. ನಾನು ಈ ಬಗ್ಗೆ ಅಪವಾದ ಚಾಸಾ 30 ರವರ ಮೇಲೆ ಬರಬಹುದು ಎನ್ನುವ ಕಾರಣಕ್ಕಾಗಿ ಈ ವಿಚಾರವನ್ನು ಮಾಳಮಾರುತಿ ಪೋ.ಠಾಣೆಗೆ ತಿಳಿಸಿರಲಿಲ್ಲ ಎಂದರೆ ಸಾಕ್ಷಿ ಈ ಬಗ್ಗೆ ನಾನು ವಿಚಾರ ಮಾಡಿರಲಿಲ್ಲ ಎನ್ನುತ್ತಾರೆ.

7. ಚಾಸಾ 30 ರವರು 9ನೇ ತಾರೀಖಿನಂದು ನಡೆದ ಘಟನೆಯ ಸ್ಥಳಕ್ಕೆ ಬಂದಿರಲಿಲ್ಲ. ನಾವು ನಿಸರ್ಗ ಧಾಬಾದ ಬಳಿ ಹೋಗಿ ನಿಂತ ನಂತರ ಅಲ್ಲಿಗೆ ಬಿಳಿ ಬಣ್ಣದ ಕಾರು ಬಂದಿತ್ತು. ನಾನು ಮತ್ತು ಚಾಸಾ 24 ಕೂಡಿಯೇ ನಿಸರ್ಗ ಧಾಬಾದ ಬಳಿ ನಿಂತಿದ್ದೆವು. ನಾನು ಮತ್ತು ಚಾಸಾ 24 ಅಲ್ಲಿಗೆ ಹೋಗಿ ಕೂಡಿ ನಿಂತ ಸುಮಾರು 5 ನಿಮಿಷಗಳಲ್ಲಿ ಆ ಬಿಳಿ ಬಣ್ಣದ ಕಾರು ಅಲ್ಲಿಗೆ ಬಂದಿತ್ತು. ನಾವು ನಿಂತ ಸ್ಥಳದಿಂದ ಸುಮಾರು 5 ರಿಂದ 8 ಅಡಿ ದೂರದಲ್ಲಿ ಆ ಕಾರು ಬಂದು ನಿಂತಿತ್ತು. ಚಾಸಾ 30 ರವರು ಮೊದಲನೇ ದಿನ ನನಗೆ ತಿಳಿಸಿದ ದತ್ತಕ ಕೊಡುವ ಮಗುವನ್ನು ಕರೆದುಕೊಂಡು ಆ ಕಾರಿನಲ್ಲಿ ಬಂದಿದ್ದಾರೆ ಎಂದು ನನಗೆ ಆ ಕಾರು ನಮ್ಮ ಬಳಿ ನಿಂತಾಗ ತಿಳಿಯಿತು. ಆ ಕಾರು ನಿಂತ ಸ್ಥಳದ ಹತ್ತಿರ ಅಥವಾ ಸುತ್ತ ಮುತ್ತ ಆಗ ಚಾಸಾ 30 ರವರು ಇರಲಿಲ್ಲ. ಮಹಾದೇವಿ ಜೈನರವರೇ ಕಾರಿನಿಂದ ಇಳಿದು ನಮ್ಮ ಸಮೀಪ

ಬಂದಿದ್ದರು. ನನ್ನ ಮತ್ತು ಮಹಾದೇವಿ ಜೈನರ ನಡುವೆ ಆಗ ಯಾವುದೇ ವಾಗ್ವಾದ ನಡೆದಿರಲಿಲ್ಲ. ನಾನು ಚಾಸಾ 24 ಮತ್ತು ಮಹಾದೇವಿ ಜೈನರ ಕೂಡಿ ಮಾತುಕತೆ ಮಾಡಲು ಪ್ರಾರಂಭಿಸಿದ ಸುಮಾರು 2-3 ನಿಮಿಷಗಳಲ್ಲಿಯೇ ಚಾಸಾ 24 ರವರು ನಮ್ಮ ತಂಡದವರಿಗೆ ಕೈ ಸನ್ನೆ ಮಾಡಿದರು. ಈ ರೀತಿ ಕೈ ಸನ್ನೆ ಮಾಡಿದ ಕಾಲಕ್ಕೆ ನಮ್ಮ ತಂಡದಲ್ಲಿ ಇಬ್ಬರು ಪೋಲಿಸ ಸಿಬ್ಬಂದಿಗಳು ಇದ್ದರು. ಪೋಲಿಸರನ್ನು ಹೊರತುಪಡಿಸಿ ನಮ್ಮ ತಂಡದಲ್ಲಿ ಒಟ್ಟು ಎಷ್ಟು ಸಿಬ್ಬಂದಿಗಳು ಇದ್ದರು ಎಂದು ನಿಖರವಾಗಿ ನನಗೆ ನೆನಪಿಲ್ಲ. ಆ ತಂಡದಲ್ಲಿ ಇದ್ದವರ ಪೈಕಿ ಚಾಸಾ 1, ಚಾಸಾ 24 ಮತ್ತು ಹಿರೇಮಠ ಮೇಡಂ ಇವರನ್ನು ಹೊರತುಪಡಿಸಿ ಉಳಿದವರ ಹೆಸರು ನನಗೆ ಗೊತ್ತಿಲ್ಲ.

8. ನಿಸರ್ಗ ಧಾಬಾದಿಂದ 500 ಮೀ. ದೂರದಲ್ಲಿ ಕೆ.ಎಲ್.ಇ. ಆಸ್ಪತ್ರೆ ಇದೆ ಎನ್ನುವುದು ನನಗೆ ಗೊತ್ತಿಲ್ಲ. ಮಹಾದೇವಿ ಜೈನರವರು ಆ ಮಗುವಿಗೆ ಆರೋಗ್ಯ ಸರಿ ಇಲ್ಲ ಮತ್ತು ನಾನು ಆ ಮಗುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದೇನೆ ಮತ್ತು ನಮ್ಮನ್ನು ಬಿಟ್ಟುಬಿಡಿ ಎಂದು ಪರಿಪರಿಯಾಗಿ ಕೇಳಿಕೊಂಡಿದ್ದಳು ಎನ್ನುವುದು ನಿಜವಲ್ಲ. ಈ ರೀತಿ ಮಹಾದೇವಿ ಜೈನರವರು ಹೇಳಿದ ನಂತರ ನನಗೆ ನಾವು ಮೊದಲನೇ ದಿನ ಚಾಸಾ 30 ರವರೊಂದಿಗೆ ಮಾತನಾಡಿದ ದತ್ತಕ ಕೊಡುವ ಮಗು ಎಂದು ನನಗೆ ತಿಳಿಯಿತು ಎನ್ನುವುದು ನಿಜ. ಈ ರೀತಿ ತಿಳಿದ ನಂತರ ನಾವು ನಮ್ಮ ತಂಡದವರು ಮತ್ತು ಪೋಲಿಸರು ಸೇರಿ ಮಹಾದೇವಿ ಜೈನರ ಮತ್ತು ಮಗುವನ್ನು ಮಾಳಮಾರುತಿ ಪೋ.ಠಾಣೆಗೆ ಕರೆದುಕೊಂಡು ಹೋಗಿದ್ದೆವು. ಆ ಮಗುವನ್ನು ಪೋ.ಠಾಣೆಗೆ ಕರೆದುಕೊಂಡು ಹೋಗುವ ಮೊದಲು ನಿಸರ್ಗ ಧಾಬಾದ ಹತ್ತಿರ ಆ ಮಗುವಿನ ನಿಜವಾದ ತಂದೆ ತಾಯಿ ಇದ್ದಾರೋ ಇಲ್ಲವೋ ಎನ್ನುವ ಬಗ್ಗೆ ನಾನೇನೂ ವಿಚಾರ ಮಾಡಿಲ್ಲ. ಆ ಮಗುವನ್ನು ಮಹಾದೇವಿ ಜೈನರವರು ರೂ.60,000/- ಕ್ಕೆ ಖರೀದಿ ಮಾಡಿದ್ದರು ಮತ್ತು ಅದನ್ನು ರೂ.1,40,000/- ಕ್ಕೆ ಮಾರಾಟ ಮಾಡಲು ಪ್ರಯತ್ನಿಸಿದ್ದು ನನಗೆ ಮಾಳಮಾರುತಿ ಪೋ.ಠಾಣೆಗೆ ಹೋದ ನಂತರ

ತಿಳಿದುಬಂದಿತ್ತು ಎಂದರೆ ಸಾಕ್ಷಿ ಮೊದಲನೇ ದಿನ ಫೋನಿನಲ್ಲಿ ಮಾತನಾಡುವಾಗಲೇ ಈ ವಿಚಾರ ತಿಳಿದಿತ್ತು ಎನ್ನುತ್ತಾರೆ. ಸಾಕ್ಷಿಯು ಪುನಃ ಆಕೆ ರೂ.60,000/-ಕ್ಕೆ ಖರೀದಿ ಮಾಡಿದ್ದು ನನಗೆ ಮೊದಲನೇ ದಿನ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ಆ ಮಗುವನ್ನು ಎಲ್ಲಿಂದ ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದರು ಎನ್ನುವ ಬಗ್ಗೆ ನನಗೆ ಸ್ವಂತ ಮಾಹಿತಿ ಇರಲಿಲ್ಲ. ನನಗೆ ನಾನು ಯಾವ ನಂಬರಿನಿಂದ ಯಾವ ನಂಬರಿಗೆ ಫೋನ ಮಾಡಿ ಮಹಾದೇವಿ ಜೈನರವರೊಂದಿಗೆ ಮಾತನಾಡಿದ್ದೆ ಎಂದು ಹೇಳಲಾಗುವುದಿಲ್ಲ. ರೂ. 1,40,000/-ಕ್ಕೆ ಖರೀದಿ ಮಾಡುವ ಮಾತುಕತೆ ರಾತ್ರಿ 09.00 ಗಂಟೆಗೆ ಆಗಿತ್ತು ಎಂದು ನಾನು ಹೇಳುತ್ತೇನೆ. ಆ ಫೋನು ಮಾತುಕತೆಯನ್ನು ರೆಕಾರ್ಡ ಮಾಡಲಾಗಿತ್ತು ಎಂದು ನಾನು ಹೇಳುತ್ತೇನೆ. ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತ ಎಲ್ಲಾ ಫೋನ ಮಾತುಕತೆಯನ್ನು ರೆಕಾರ್ಡ ಮಾಡಿಕೊಂಡಿದ್ದೆನು.

9. ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆದ 5 ಫೋನ ಮಾತುಕತೆಯನ್ನು ರೆಕಾರ್ಡ ಮಾಡಿಕೊಂಡಿದ್ದೆನು. ಆ 5 ಫೋನ ಮಾತುಕತೆಯ ಪೈಕಿ 4 ಫೋನ ಮಾತುಕತೆ 8ನೇ ತಾರೀಖಿಗೆ ಸಂಬಂಧಿಸಿದ್ದಾಗಿದೆ. ಅದರ ಪೈಕಿ 8ನೇ ತಾರೀಖಿನ ಮೊದಲ ಫೋನ ಕಾಲ್ ರಾತ್ರಿ 09.00ಗಂಟೆಗೆ ಆಗಿತ್ತು. ನಾನು ಈ ರೀತಿ ಫೋನ್ ಮಾತುಕತೆಯಾಗಿ ಅದನ್ನು ರೆಕಾರ್ಡ ಮಾಡಿಕೊಂಡಿದ್ದೇನೆ ಎಂದು ಲಿಖಿತ ರೂಪದಲ್ಲಿ ಮಕ್ಕಳ ಸಹಾಯವಾಣಿಗೆ ಯಾವುದೇ ದೂರು ಕೊಟ್ಟಿಲ್ಲ. ವಡಗಾಂವದಲ್ಲಿ ಒಂದು ಪೋಲಿಸ ಠಾಣೆ ಇದೆ ಎನ್ನುವುದು ನಿಜ. ನಾನು ವಡಗಾಂವ ಪೋ.ಠಾಣೆಗೆ ಹೋಗಿ ಈ ಬಗ್ಗೆ ಯಾವುದೇ ದೂರು ಕೊಟ್ಟಿಲ್ಲ ಮತ್ತು ದೂರು ಕೊಡಲು ನನಗೆ ಯಾವುದೇ ಅಡಚಣೆ ಇರಲಿಲ್ಲ. ನಿಸರ್ಗ ಧಾಬಾದ ಬಳಿ ಆದ ಎಲ್ಲಾ ಘಟನೆ, ಅಳುವುದು, ಗೋಳಾಡುವುದು, ಚೀರಾಡುವುದು ಸುಮಾರು 15 ನಿಮಿಷಗಳ ಕಾಲ ಆಗಿತ್ತು. ಆ ಕಾಲಕ್ಕೆ ಅಲ್ಲಿ ಯಾವುದೇ ಹಿರಿಯ ಪೋಲಿಸ ಅಧಿಕಾರಿಗಳು ಬಂದಿರಲಿಲ್ಲ ಆದರೆ ಪುರುಷ ಪೋಲಿಸರು ಮತ್ತೆ ಸ್ಥಳಕ್ಕೆ ಬಂದಿದ್ದರು. ಪೋಲಿಸರು ಜೀಪಿನಲ್ಲಿ

ಆ ಸ್ಥಳಕ್ಕೆ ಬಂದ ನಂತರ ಕೂಡ 1ನೇ ಆರೋಪಿಯು ತಾನು ಆ ಮಗುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಬಂದಿರುತ್ತೇನೆ ಮತ್ತು ತನ್ನನ್ನು ಬಿಟ್ಟುಬಿಡಿ ಎಂದು ಕೇಳಿದ್ದರು ಎನ್ನುವುದು ನಿಜವಲ್ಲ. ನಿಸರ್ಗ ಧಾಬಾದ ಬಳಿ ಆದ ಪೂರ್ತಿ ಘಟನೆಯನ್ನು CWC ರವರು ವಿಡಿಯೋ ರೆಕಾರ್ಡಿಂಗ ಮಾಡಿದ್ದರು ಎಂದು ನಾನು ಹೇಳುತ್ತೇನೆ. ಅಲ್ಲಿ ಆ ಘಟನೆಯ ಸಂಬಂಧ ಫೋಟೊ ತೆಗೆಯಲಾಗಿತ್ತು ಎಂದು ನಾನು ಹೇಳುತ್ತೇನೆ. ನಿಸರ್ಗ ಧಾಬಾದ ಬಳಿ ಈ ಘಟನೆಯ ಸಂಬಂಧ ಯಾವುದೇ ಪಂಚನಾಮೆಯನ್ನು ಮಾಡಿರಲಿಲ್ಲ.

10. ಪೋ.ಠಾಣೆಗೆ ಮಗುವನ್ನು ಕರೆದುಕೊಂಡು ಹೋಗುವಾಗ ಆ ಮಗುವಿನ ಆರೋಗ್ಯ ಸ್ಥಿತಿ ಸರಿಯಾಗಿರಲಿಲ್ಲ ಎನ್ನುವುದು ನಿಜವಲ್ಲ. ಮಾಳಮಾರುತಿ ಪೋ.ಠಾಣೆಗೆ ಹೋದ ನಂತರ ಆ ಮಗುವನ್ನು ಬೆಳಿಗ್ಗೆ 07.00 ಗಂಟೆಯ ಸುಮಾರಿಗೆ ಸಿವಿಲ್ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ಬೆಳಿಗ್ಗೆ 06.00ಗಂಟೆಯಿಂದ 07.00 ಗಂಟೆಯವರೆಗೆ ಯಾವುದೇ ವೈದ್ಯರನ್ನು ಕರೆಯಿಸಿ ಆ ಮಗುವನ್ನು ವೈದ್ಯರಿಗೆ ತೋರಿಸಿರಲಿಲ್ಲ. 1ನೇ ಆರೋಪಿಯು ನರ್ಸಿಂಗ್ ಅಸಿಸ್ಟೆಂಟ್ ಆಗಿ ಕೆಲಸ ಮಾಡುತ್ತಿದ್ದಳು ಎಂದರೆ ಸಾಕ್ಷಿ ಆಕೆ ಕರೋನಾ ಸಮಯದಲ್ಲಿ ಚಾಸಾ 30 ರವರ ಏಜೆನ್ಸಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ನನಗೆ ಆ ಬಳಿಕ ಪೋ.ಠಾಣೆಯಲ್ಲಿ ತಿಳಿದುಬಂತು ಎಂದು ಹೇಳುತ್ತಾರೆ. 1ನೇ ಆರೋಪಿಯು ಅನಾರೋಗ್ಯದಿಂದ ಬಳಲುತ್ತಿರುವವರಿಗೆ ಮತ್ತು ಮಕ್ಕಳಿಗೆ ಸಹಾಯ ಮಾಡುವ ವೃತ್ತಿ ಮಾಡುತ್ತಿದ್ದಾಳೆ ಎಂದು ನನಗೆ ಆ ಬಳಿಕ ತಿಳಿದುಬಂತು. 1ನೇ ಆರೋಪಿಯು ಆ ಮಗುವಿಗೆ ಆರೋಗ್ಯ ಸರಿಯಿಲ್ಲದ ಕಾರಣ ಚಿಕಿತ್ಸೆಗಾಗಿ ಕೆಎಲ್ಇ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದಳು ಎನ್ನುವ ವಿಚಾರ ಕೂಡ ನನಗೆ ತಿಳಿದುಬಂತು ಎನ್ನುವುದು ನಿಜವಲ್ಲ.

11. ಮಾಳಮಾರುತಿ ಪೋ.ಠಾಣೆಗೆ ನಾನು ಹೋದ ನಂತರ ಸಿಪಿಐ ರವರು ಠಾಣೆಗೆ ಎಷ್ಟು ಗಂಟೆಗೆ ಬಂದಿದ್ದರು ಎಂದು ನನಗೆ ಹೇಳಲಾಗುವುದಿಲ್ಲ. ನಾವು ಹೋದ ಸುಮಾರು

½ ತಾಸಿನ ಒಳಗಡೆ ಸಿಪಿಐ ರವರು ಮಾಳಮಾರುತಿ ಪೋ.ಠಾಣೆಗೆ ಬಂದಿದ್ದರು ಎಂದು ನಾನು ಹೇಳುತ್ತೇನೆ. ಸಿಪಿಐ ರವರು ಅಲ್ಲಿ ತಮ್ಮ ಸಿಬ್ಬಂದಿಗಳನ್ನು ವಿಚಾರಣೆ ಮಾಡಿದ ನಂತರ 1ನೇ ಆರೋಪಿಯು ಆ ಮಗುವನ್ನು ಮಾರಾಟ ಮಾಡುವ ಸಲುವಾಗಿ ಅಲ್ಲಿ ಬಂದಿದ್ದಳು ಎನ್ನುವ ವಿಚಾರವನ್ನು ತಿಳಿಸಿದ್ದರು. ಸಾಕ್ಷಿ ತಾನೇ ಸಿಪಿಐ ರವರಿಗೆ ಈ ವಿಚಾರವನ್ನು ಹೇಳಿದ್ದೆ ಎಂದು ಸ್ವತಃ ಹೇಳುತ್ತಾರೆ. ನಾನು ಹೇಳಿದ್ದನ್ನು ಸಿಪಿಐ ರವರು 2 ಪುಟದಷ್ಟು ಬರೆದುಕೊಂಡಿದ್ದರು. ಅದು ಹಸ್ತಾಕ್ಷರದಲ್ಲಿ ಇದ್ದು ಅದಕ್ಕೆ ಅವರು ನನ್ನ ಸಹಿಯನ್ನು ಪಡೆದುಕೊಂಡಿದ್ದರು. ಆ ಹೇಳಿಕೆಯನ್ನು ಬರೆದುಕೊಳ್ಳುವ ಮೊದಲೇ ನಾನು ಫೋನ ಮಾತುಕತೆಯನ್ನು ರೆಕಾರ್ಡಿಂಗ ಮಾಡಿರುವುದನ್ನು ಇನ್ನೊರ್ವ ಪೋಲಿಸ ಅಧಿಕಾರಿಗೆ ಕೊಟ್ಟಿದ್ದೆನು. ನಾನು ಸಿಪಿಐ ರವರ ಬಳಿ ಈ ರೀತಿ ಹೇಳಿಕೆ ಕೊಡುವಾಗ ಈ ರೀತಿ ಫೋನು ಮಾತುಕತೆಯ ರೆಕಾರ್ಡಿಂಗನ್ನು ಇನ್ನೊರ್ವ ಪೋ. ಅಧಿಕಾರಿಗೆ ನಾನು ಈಗಾಗಲೇ ಕೊಟ್ಟಿರುತ್ತೇನೆ ಎಂದು ಹೇಳಿರಲಿಲ್ಲ. ನಾನು ಆ ಪೋನ್ ರೆಕಾರ್ಡಿಂಗನ್ನು ಯಾವ ಪೋಲಿಸ ಅಧಿಕಾರಿಗೆ ಕೊಟ್ಟಿದ್ದೇನೆ ಎಂದು ಅವರ ಹೆಸರು ಮತ್ತು ಹುದ್ದೆ ಹೇಳಲಾಗುವುದಿಲ್ಲ. ಸಿಪಿಐ ರವರ ಮುಂದೆ ನಾನು 8 ಮತ್ತು 9ನೇ ತಾರೀಖಿನಂದು ಆದ ಘಟನೆಗಳ ಬಗ್ಗೆ 2 ಪುಟಗಳಲ್ಲಿ ಸಹಿ ಹಾಕಿ ಹಸ್ತಾಕ್ಷರದಲ್ಲಿ ದಾಖಲಿಸಿದ ಹೇಳಿಕೆ ಹೊರತುಪಡಿಸಿ ನಾನು ಪೋಲಿಸರ ಮುಂದೆ ಬೇರೆ ಯಾವುದೇಹೇಳಿಕೆಯನ್ನು ಕೊಟ್ಟಿರುವುದಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹೇಳಿಕೆ ಮಾತ್ರ ಕೊಟ್ಟಿದ್ದು ಪಿರ್ಯಾದಿಯನ್ನು ಕೊಟ್ಟಿರುವುದಿಲ್ಲ. 9ನೇ ತಾರೀಖಿನ ನಂತರ ಮತ್ತೆ ಯಾವತ್ತೂ ಕೂಡ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೋ.ಠಾಣೆಗೆ ಹೋಗಿರುವುದಿಲ್ಲ. ಆ ಬಳಿಕ ಪೋಲಿಸರು ಯಾವತ್ತೂ ನನ್ನ ಹೇಳಿಕೆಯನ್ನು ಪಡೆದುಕೊಂಡಿಲ್ಲ.

12. ನಿಸರ್ಗ ಧಾಬಾದ ಸುತ್ತ ಮುತ್ತ ಅಂಗಡಿ ಮುಂಗಟ್ಟು ಮತ್ತು ಜನ ಸಂಚಾರ ಇರುತ್ತದೆ ಎಂದರೆ ಸಾಕ್ಷಿ ಆಗ ಇರಲಿಲ್ಲ ಎನ್ನುತ್ತಾರೆ. ನಿಸರ್ಗ ಧಾಬಾದ ಸುತ್ತ ಬೆಳಗಿನ ಹೊತ್ತು ಬಹಳಷ್ಟು ಮಂದಿ ವಾಕಿಂಗ್ ಮಾಡುವವರು ಇರುತ್ತಾರೆ ಎಂದರೆ ಸಾಕ್ಷಿ ನಮ್ಮ

ಹತ್ತಿರ ಆಗ ಯಾರೂ ಇರಲಿಲ್ಲ ಎನ್ನುತ್ತಾರೆ. ನಿಸರ್ಗ ಧಾಬಾದ ಬಳಿ ಈ ಘಟನೆಯ ಕಾಲಕ್ಕೆ ಕೂಗಾಡ ಚೀರಾಟ ಕೇಳಿ ಅಕ್ಕಪಕ್ಕದವರು ಬಂದಿದ್ದರೇ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಆಗ ಮಗುವನ್ನು ಹಿಡಿದುಕೊಂಡಿದ್ದರಿಂದ ಅದನ್ನು ಗಮನಿಸಿಲ್ಲ ಎನ್ನುತ್ತಾರೆ. ನಿಸರ್ಗ ಧಾಬಾ ಮತ್ತು ಅದರ ಅಕ್ಕಪಕ್ಕ ಸಿಸಿಟಿವಿ ಕ್ಯಾಮೇರಾಗಳು ಇವೆಯೇ ಎನ್ನುವುದನ್ನು ನಾನು ಗಮನಿಸಿಲ್ಲ.

(ಈ ಸಂದರ್ಭದಲ್ಲಿ ನ್ಯಾಯಾಲಯದ ಬೆಳಗಿನ ಅವಧಿ ಮುಗಿದ ಕಾರಣ ಮುಂದಿನ ಪಾಟೀ ಸವಾಲಿಗೆ ಈ ಪ್ರಕರಣವನ್ನು ಮಧ್ಯಾಹ್ನದ ಅವಧಿಗೆ ಮುಂದೂಡಲಾಗಿದೆ.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.

**SC No. 149/2025**
**PW-7**
**CW-27**

ದಿನಾಂಕ : 02.09.2026 ರಂದು ಸಾಕ್ಷಿದಾರರಿಗೆ ಮಧ್ಯಾಹ್ನ ಪುನಃ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 1ನೇ ಆರೋಪಿತಳ ಪರವಾಗಿಃ ಶ್ರೀ ಸಿ ಎ ಟಿ. ವಕೀಲರಿಂದಃ

13. ಕಾರಿನಲ್ಲಿದ್ದ ಮಗುವಿನ ನಿಜವಾದ ತಂದೆ ತಾಯಿ ಯಾರು ಮತ್ತು ಅವರ ಹೆಸರು ಏನು ಎನ್ನುವ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನನಗೆ ಪ್ರವೀಣ ಮಂಜುನಾಥ ಮಡಿವಾಳರ ಮತ್ತು ಪವಿತ್ರಾ ಸೋಮಪ್ಪ ಮಡಿವಾಳರ ಎನ್ನುವವರು ಯಾರು ಎಂದು ಗೊತ್ತಿಲ್ಲ. ಈಗ ನ್ಯಾಯಾಲಯದ ಮುಂದೆ ಇರುವ 4 ಮತ್ತು 5ನೇ ಆರೋಪಿತರು ನಿಸರ್ಗ ಧಾಬಾದ ಬಳಿ ಕಾರು ಬಂದು ಈ ಮೇಲೆ ಹೇಳಿದ ಘಟನೆ ನಡೆದಾಗ ಅವರು ಇದ್ದಿರುವುದನ್ನು ನೀವು ಗಮನಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಗಮನಿಸಿದ್ದೆ ಆದರೆ ಈ ಇಬ್ಬರು ವ್ಯಕ್ತಿಗಳು ಅಲ್ಲಿ ಇರಲಿಲ್ಲ ಎನ್ನುತ್ತಾರೆ. ನಿಸರ್ಗ ಧಾಬಾದ ಬಳಿ ನಾನು 1ನೇ ಆರೋಪಿಯ ಬಳಿ ಆ ಮಗು ಯಾರದ್ದು ಎಂದು ವಿಚಾರ ಮಾಡಿಲ್ಲ. ಆ ಮಗುವಿನ ತಂದೆ ತಾಯಿ ಅವರ ಜೊತೆ ಬಂದಿದ್ದಾರೋ ಎಂದು ಕೂಡ ನಾನು 1ನೇ ಆರೋಪಿಯೊಂದಿಗೆ ವಿಚಾರ ಮಾಡಿಲ್ಲ. ಮಹಾದೇವಿ ಜೈನರ ಯಾರು, ಏನು ಎನ್ನುವ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ಮಹಾದೇವಿ ಜೈನರ ಯಾರು ಎನ್ನುವ ಬಗ್ಗೆ ನನಗೆ ಮೊದಲ ಬಾರಿಗೆ ನಾವು ಮಾಳಮಾರುತಿ ಪೋ.ಠಾಣೆಗೆ ಹೋದ ನಂತರ ತಿಳಿಯಿತು. ಮಹಾದೇವಿ ಜೈನರ ಎನ್ನುವವರ ಹೆಸರು ನನಗೆ ಮೊದಲ ಬಾರಿಗೆ ತಿಳಿದುಬಂದಿದ್ದು ನಾವು ಮಾಳಮಾರುತಿ ಪೋ.ಠಾಣೆಗೆ ಹೋದ ನಂತರ. ಸಾಕ್ಷಿ ಮೊದಲು ಆಕೆ ತನ್ನ ಹೆಸರನ್ನು ನನ್ನ ಬಳಿ ಪ್ರೀಯಂಕಾ ಜೈನರ ಎಂದು ಹೇಳಿದ್ದರು ಎನ್ನುತ್ತಾರೆ. 8ನೇ ತಾರೀಖಿನಂದು ಸಾಯಂಕಾಲ ನಾನು ಫೋನ ಮಾಡಿದಾಗ ಮೊದಲ ಬಾರಿಗೆ ನನಗೆ ಆಕೆಯ ಹೆಸರು ಪ್ರೀಯಂಕಾ ಜೈನರ ಎಂದು ಹೇಳಿದ್ದರು. ಮೊದಲು ನಾನೇ ಆಕೆಗೆ ಫೋನ ಮಾಡಿದ್ದೆನು. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಹೇಳಿದಂತೆ ಮಹಾದೇವಿ ಜೈನರವರೊಂದಿಗೆ ಫೋನಿನಲ್ಲಿ ಮಾತನಾಡುವಾಗ ಆಕೆ ಮಗುವಿಗೆ ರೂ.2,00,000/-

ಕೊಡಬೇಕು ಎಂದು ಹೇಳಿದ್ದರು ಮತ್ತು ನಾನು ರೂ.1,40,000/- ಕೊಡುತ್ತೇನೆ ಎಂದು ಆಕೆಗೆ ಹೇಳಿದೆನು ಮತ್ತು ಅದಕ್ಕೆ ಮಹಾದೇವಿ ಜೈನರವರು ಒಪ್ಪಿಕೊಂಡಿದ್ದಳು ಎಂದು ನಾನು ಪೋಲಿಸರ ಮುಂದೆ ಹೇಳಿಕೆ ಕೊಡುವಾಗ ಹೇಳಿರುವುದಿಲ್ಲ. ಈ ವಿಷಯವನ್ನು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಎನ್ನುವುದು ನಿಜ.

14. ಮಹಾಂತೇಶ ಭಜಂತ್ರಿಯವರು ಮಕ್ಕಳ ಸಂಸ್ಥೆಯ ಅಧಿಕಾರಿಯಾಗಿದ್ದು ಅವರ ಹುದ್ದೆಯ ಬಗ್ಗೆ ಸಂಪೂರ್ಣ ವಿವರ ತಿಳಿದಿಲ್ಲ. ಆ ಮಹಾಂತೇಶ ಭಜಂತ್ರಿಯವರೇ ಈ ಪ್ರಕರಣದಲ್ಲಿ ಪೋಲಿಸ ಪಿರ್ಯಾದಿ ಕೊಟ್ಟಿದ್ದರು ಎಂದು ನಾನು ಹೇಳುತ್ತೇನೆ. ಅವರು ಪಿರ್ಯಾದಿ ಕೊಟ್ಟ ವಿಚಾರ ನನಗೆ 08.06.2024 ರಂದು ರಾತ್ರಿ ತಿಳಿದಿತ್ತು. ಮಹಾಂತೇಶ ಭಜಂತ್ರಿಯವರು ಕೊಟ್ಟ ಪಿರ್ಯಾದಿ ಎಲ್ಲಿದೆ ಮತ್ತು ಅದರ ಬಗ್ಗೆ ಏನೆಲ್ಲಾ ಕ್ರಮ ಆಗಿದೆ ಎನ್ನುವ ಕುರಿತು ನನಗೆ ಮಾಹಿತಿ ಇಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಘಟನೆಯ ಬಗ್ಗೆ ಕೊಟ್ಟಂತಹ ಪಿರ್ಯಾದಿ ಅಂದರೆ ಮಹಾಂತೇಶ ಭಜಂತ್ರಿಯವರು ಕೊಟ್ಟ ಪಿರ್ಯಾದಿ ಎಂದು ನಾನು ಹೇಳುತ್ತೇನೆ.

15. ದಿ.08.06.2024 ರಂದು ಚಾಸಾ 30 ರವರು ನನಗೆ ಮಹಾದೇವಿ ಜೈನರವರ ಫೋನ ನಂಬರನ್ನು ಕೊಟ್ಟಿದ್ದರು ಮತ್ತು ಆ ಫೋನಿನಲ್ಲಿ ನಾನು ಮಾತನಾಡುವಾಗ ಆಕೆ ಮಗುವಿಗೆ ರೂ.2,00,000/- ಕೊಡಬೇಕು ಎಂದು ಹೇಳಿದ್ದಳು ಮತ್ತು ನಾನು ರೂ. 1,40,000/- ಕೊಡುತ್ತೇನೆ ಎಂದು ಹೇಳಿದಾಗ ಆಕೆ ಅದಕ್ಕೆ ಒಪ್ಪಿಕೊಂಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ದಿ. 09.06.2024 ರಂದು ನಾನು ಚಾಸಾ 24, ಪೋಲಿಸರು ಮತ್ತು ನಮ್ಮ ತಂಡದವರು ನಿಸರ್ಗ ಧಾಬಾದ ಬಳಿ ಹೋಗಿದ್ದೆವು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ಅಲ್ಲಿ ಮಗುವನ್ನು ಖರೀದಿ ಮಾಡುವ ಬಗ್ಗೆ ನಾಟಕ ಮಾಡಲು ನಾನು ತಾಯಿಯಾಗಿ ಮತ್ತು ಚಾಸಾ 24 ತಂದೆಯಾಗಿ

ನಟಿಸಿದ್ದೆವು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ನಾವು ಅಲ್ಲಿ ನಿಂತಿದ್ದಾಗ 8906 ನಂಬರಿನ ಒಂದು ಬಿಳಿ ಕಾರು ಬಂದಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ಆ ಕಾರಿನಿಂದ ಮಹಾದೇವಿ ಜೈನರವರು ನನ್ನ ಮತ್ತು ಚಾಸಾ 24 ರವರ ಬಳಿ ಬಂದು ಮಾತುಕತೆ ಮಾಡಿದ್ದರು ಮತ್ತು ಆ ಬಳಿಕ ಚಾಸಾ 24 ರವರು ಕೈ ಸನ್ನೆ ಮಾಡಿದಾಗ ನಮ್ಮ ತಂಡದವರು ಮತ್ತು ಪೋಲಿಸರು ಅಲ್ಲಿಗೆ ಬಂದು ಆ ಬಳಿಕ ನಾವು ಮಹಾದೇವಿ ಜೈನರ ಮತ್ತು ಮಗುವಿನೊಂದಿಗೆ ಮಾಳಮಾರುತಿ ಪೋ.ಠಾಣೆಗೆ ಹೋಗಿದ್ದೆವು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ.

16. 1, 4 ಮತ್ತು 5 ನೇ ಆರೋಪಿತರು ಸೇರಿ ಆ ಮಗುವನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಬಂದಿದ್ದು ನಾವು ತಪ್ಪು ಮಾಹಿತಿಯ ಕಾರಣ ಅವರನ್ನು ಮಾಳ ಮಾರುತಿ ಪೋ.ಠಾಣೆಗೆ ಕರೆದುಕೊಂಡು ಹೋಗಿದ್ದೆವು ಎನ್ನುವುದು ನಿಜವಲ್ಲ. ನಾನು ಮತ್ತು ಮಹಾದೇವಿ ಜೈನರ ಚಾಸಾ 30 ರವರ ಏಜೆನ್ಸಿಯಲ್ಲಿ ಕೆಲಸ ಮಾಡಿದ್ದೆವು. ಆ ಕಾಲಕ್ಕೆ ನನಗೆ ಮಹಾದೇವಿ ಜೈನರೊಂದಿಗೆ ಆದಂತಹ ವೈರತ್ವದ ಕಾರಣ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಯಾವುದೇ ಘಟನೆ ನಡೆಯದೇ ಇದ್ದರೂ ಕೂಡ ನಾನು ಪೋಲಿಸರು ಮತ್ತು ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳ ಮಾತು ಕೇಳಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ.

<u>ಪಾಟೀ ಸವಾಲುಃ 2ನೇ ಆರೋಪಿತರ ಪರವಾಗಿಃ ಶ್ರೀ ಬಿ ಆರ್ ಕೆ ವಕೀಲರಿಂದಃ</u>

17. ಚಂದನ ಸುಬೇದಾರವರ ಬಗ್ಗೆ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇರುವುದಿಲ್ಲ. ಆ ಚಂದನ ಸುಬೇದಾರವರನ್ನು ನಾನು ಈವರೆಗೂ ನೋಡಿಲ್ಲ. ಮಹಾದೇವಿ ಜೈನರವರು

ಚಂದನ ಸುಬೇದಾರರಿಂದ ಆ ಮಗುವನ್ನು ಖರೀದಿಸಿರುವ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

ಪಾಟೀ ಸವಾಲುಃ ಇತರ ಆರೋಪಿತರ ಪರವಾಗಿಃ

ಇತರ ಆರೋಪಿತರ ಪರ ವಕೀಲರು ತಾವು ಮೇಲಿನ ಪಾಟೀ ಸವಾಲನ್ನು ಅನುಸರಿಸುವುದಾಗಿ ಹೇಳುತ್ತಾರೆ.

ಮರು ಸವಾಲು ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.